# ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಿರೇಕೆರೂರ.

**ಉಪಸ್ಥಿತರು:- ಶ್ರೀ ವೈ. ಕೆ. ಬೇನಾಳ,** ಬಿ.ಎ., ಎಲ್.ಎಲ್.ಬಿ., (ಆನರ್ಸ),
**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು, ಹಿರೇಕೆರೂರ.**

**ದಿನಾಂಕ 24 ನೇ ಮೇ 2023**

**ಎಫ್.ಡಿ.ಪಿ. ಸಂಖ್ಯೆ: 4/2022**

**ಅರ್ಜಿದಾರರು:-**

ಗದಿಗೆಮ್ಮ ಮತ್ತು ಇತರರು.

**ವಿರುದ್ಧ**

**ಎದುರುದಾರರು:-**

ಗಂಗಮ್ಮ ಮತ್ತು ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ-1 ಮತ್ತು 2**

**ಅರ್ಜಿದಾರರು:-**

1) ಗದಿಗೆಮ್ಮ ಕೋಂ ಶಿವಪ್ಪ ಸವಿಕೆರೆ,
ವಃ 68 ವರ್ಷ, ಉಃ ಮನೆಕೆಲಸ,
ಸಾಃ ಕುಮ್ಮೂರು, ತಾ: ಬ್ಯಾಡಗಿ, ಜಿ: ಹಾವೇರಿ.

2) ಕಮಲಮ್ಮ ಕೋಂ ಸಂಗಪ್ಪ ಕೆಂಚಣ್ಣನವರ,
ವ: 68 ವರ್ಷ, ಉ: ಮನೆಕೆಲಸ,
ಸಾ: ಕೋಡ ಗ್ರಾಮ, ತಾ: ಹಿರೇಕೆರೂರ, ಜಿ: ಹಾವೇರಿ.

3) ಶಾಂತಮ್ಮ ಕೋಂ ವೀರಪ್ಪ ನರೆಗಲ್.
ವ: 65 ವರ್ಷ, ಉ: ಮನೆಕೆಲಸ,
ಸಾ: ಚಿಕ್ಕಬೂದಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.

**(ಅರ್ಜಿದಾರರ ಪರ ವಕೀಲರು - ಶ್ರೀ ವಿ.ವಿ. ಮುಚುಡಿ)**

**ವಿರುದ್ಧ**

**ಎದುರುದಾರರು:-**

1) ಗಂಗಮ್ಮ ಕೋಂ ಕೆ.ಜಿ.ಕುಬೇರಗೌಡ,
ವ: 48 ವರ್ಷ, ಉ: ಮನೆಕೆಲಸ,
ಸಾ: ನಂದಿತಾವರೆ, ತಾ: ಹರಿಹರ,
ಜಿ: ದಾವಣಗೆರೆ.

2) ಹನುಮಗೌಡ ತಂದೆ ಕೊಟೇಗೌಡ ಪ್ಯಾಟಿ,
ವ: 63 ವರ್ಷ, ಉ: ಕೃಷಿ,
ಸಾ: ಚಿಕ್ಕಬೂದಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.

3) ಬಸವರಾಜ @ ಬಸವನಗೌಡ ತಂದೆ ಕೊಟೇಗೌಡ ಪ್ಯಾಟಿ,
ವ: 63 ವರ್ಷ, ಉ: ಕೃಷಿ,
ಸಾ: ಚಿಕ್ಕಬೂದಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.
ಹಾ/ವ: ಹಳ್ಳಿಹಾಳ, ತಾ: ಹರಿಹರ, ಜಿ: ದಾವಣಗೆರೆ.

4) ರಾಮನಗೌಡ ತಂದೆ ಕೊಟೇಗೌಡ ಪ್ಯಾಟಿ,
ವ: 58 ವರ್ಷ, ಉ: ಕೃಷಿ,
ಸಾ: ಚಿಕ್ಕಬೂದಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.

5) ಶಶಿಕಲಾ ಕೋಂ ರಾಮನಗೌಡ ಪ್ಯಾಟಿ,
ವ: 48 ವರ್ಷ, ಉ: ಕೃಷಿ,
ಸಾ: ಚಿಕ್ಕಬೂದಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.

6) ಭರಮಗೌಡ ತಂದೆ ಥಕ್ಕನಗೌಡ ಪ್ಯಾಟಿ,
ವ: 57 ವರ್ಷ, ಉ: ಕೃಷಿ,
ಸಾ: ಚಿಕ್ಕಬೂದಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.

7) ಪುಟ್ಟನಗೌಡ ತಂದೆ ಥಕ್ಕನಗೌಡ ಪ್ಯಾಟಿ,
ವ: 43 ವರ್ಷ, ಉ: ಕೃಷಿ,
ಸಾ: ಚಿಕ್ಕಬೂದಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.

8) ಉಮೇಶ ತಂದೆ ಹೆಚ್.ಟಿ. ಶಾಂತನಗೌಡ,
ವ: 32 ವರ್ಷ, ಉ: ಕೃಷಿ,
ಸಾ: ಹಳ್ಳಿಹಾಳ, ತಾ: ಹಿರೇಕೆರೂರ, ಜಿ: ಹಾವೇರಿ.

**(1 ನೇ ಎದುರುದಾರನ ಪರ ವಕೀಲರು - ಶ್ರೀ ಹೆಚ್.ಸಿ.ಕರಿನಿಂಗಳವರ)**
**(4 ಮತ್ತು 5 ನೇ ಎದುರುದಾರರ ಪರ ವಕೀಲರು - ಶ್ರೀ ಬಿ.ಜಿ.ಪಾಟೀಲ)**
**(2, 3, 6 ರಿಂದ 8 ನೇ ಎದುರುದಾರರ ಸ್ಥಾನದಲ್ಲಿ ಏಕತರ್ಫಿ)**

## ಮಧ್ಯಂತರ ಅರ್ಜಿ ಸಂಖ್ಯೆ-1 ಮತ್ತು 2 ರ ಮೇಲೆ ಆದೇಶ

ಅರ್ಜಿದಾರರು ಈ ಮಧ್ಯಂತರ ಅರ್ಜಿ ಸಂ.1 ಮತ್ತು 2 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 13 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ದಾವಾ "ಬಿ" ಮತ್ತು "ಸಿ" ಆಸ್ತಿಗಳಿಗೆ ಸಂಬಂಧಿಸಿದಂತೆ ಹಿರೇಕೆರೂರಿನ ತಾಲೂಕು ಸರ್ವೇಯರನ್ನು ಮತ್ತು "ಡಿ" ಆಸ್ತಿಗಳಿಗೆ ಸಂಬಂಧಿಸಿದಂತೆ ವಕೀಲರನ್ನು ನ್ಯಾಯಾಲಯದ ಆಯುಕ್ತರನ್ನಾಗಿ ನೇಮಕ ಮಾಡಬೇಕೆಂದು ಕೋರಿರುತ್ತಾರೆ.

2. 2 ನೇ ಅರ್ಜಿದಾರಳು ಈ ಮಧ್ಯಂತರ ಅರ್ಜಿಗಳನ್ನು ತನ್ನ

ಪ್ರಮಾಣಪತ್ರಕೊಂದಿಗೆ ಸಲ್ಲಿಸಿ, ಅವುಗಳಲ್ಲಿ ವಿವರವಾದ ಕಾರಣವನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾಳೆ.

3. 1, 4 ಮತ್ತು 5ನೇ ಎದುರುದಾರರು ಈ ಮಧ್ಯಂತರ ಅರ್ಜಿಗಳಿಗೆ ಮೇಮೋ ಸಲ್ಲಿಸುವುದರ ಮೂಲಕ ಮೂಲ ಅರ್ಜಿಗೆ ಸಲ್ಲಿಸಿದ ತಕರಾರನ್ನು ಅಳವಡಿಸಿಕೊಂಡಿರುತ್ತಾರೆ.

4. ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರರು ಈ ಮಧ್ಯಂತರ ಅರ್ಜಿಗಳಲ್ಲಿ ಕೋರಿರುವಂತೆ ನ್ಯಾಯಾಲಯದ ಆಯುಕ್ತರನ್ನು ನೇಮಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾರೆಯೇ?

ಅಂಶ- 2- ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ಸಕಾರಾತ್ಮಕವಾಗಿ ಮತ್ತು

ಅಂಶ-2 - ಅಂತಿಮ ಆದೇಶದಂತೆಃ

## ಕಾರಣಗಳು

7. **ಅಂಶ**-1:- ಅರ್ಜಿದಾರರು ತಮ್ಮ ಮೂಲ ಅರ್ಜಿಯಲ್ಲಿ, ಈ ಅರ್ಜಿದಾರರು ಮೂಲ ದಾವೆ ನಂ. 27/2015 ರಲ್ಲಿ 5 ರಿಂದ 7 ನೇ ಪ್ರತಿವಾದಿಗಳಾಗಿದ್ದು, ಮತ್ತು ಹಾವೇರಿಯ 2 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ಆರ್. ಎ. ನಂ. 113/2018 ರಲ್ಲಿ 5 ರಿಂದ 7 ನೇ ಎದುರುದಾರರಾಗಿದ್ದರು. 1 ನೇ ಎದುರುದಾರಳು ಸದರಿ ಮೂಲ ದಾವೆಯಲ್ಲಿ ವಾದಿಯಾಗಿದ್ದಳು. ದಾವಾ "ಬಿ ಯಿಂದ ಡಿ" ತಪಶೀಲಿನ ಆಸ್ತಿಗಳಲ್ಲಿ ಅರ್ಜಿದಾರರಿಗೆ ತಲಾ 1/7 ಹಿಸ್ಸೆ ಎಂದು ಪ್ರಾಥಮಿಕ ಡಿಕ್ರಿಯನ್ನು ಆರ್.ಎ.ನಂ.113/2018 ರಲ್ಲಿ 2 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯವು ಮಾರ್ಪಡಿಸಿರುತ್ತದೆ. ಅದರಂತೆ, ಅಂತಿಮ ಡಿಕ್ರಿಯನ್ನು ಡ್ರಾಗೊಳಿಸಬೇಕೆಂದು ಕೋರಿರುತ್ತಾರೆ. 1 ನೇ ಎದುರುದಾರಳು ಮುಖ್ಯ ಅರ್ಜಿಗೆ ಸಲ್ಲಿಸಿದ ತಕರಾರಿನಲ್ಲಿ, ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯ ಧಾರವಾಡ ಪೀಠದಲ್ಲಿ ಆರ್.ಎಸ್.ಎ ನಂ. 100369/22 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ. ಒಂದು ವೇಳೆ, ಅರ್ಜಿದಾರರ ಮಾಗಣಿಯ ಪ್ರಕಾರ ಅಂತಿಮ ಡಿಕ್ರಿ ಮಾಡಿದಲ್ಲಿ, “ಎ" ತಪಶೀಲಿನ 1 ಮತ್ತು 2 ನೇ ಆಸ್ತಿಗಳಲ್ಲಿನ 1 ನೇ ಎದುರುದಾರಳ ಕಾನೂನು ರೀತಿಯ ಹಿಸ್ಸಾದ ಹಕ್ಕು ನಷ್ಟವಾಗುತ್ತದೆಂದು ಹೇಳಿರುತ್ತಾಳೆ. ಅದೇ ರೀತಿ, 4 ಮತ್ತು 5 ನೇ

ಎದುರುದಾರರು ಮುಖ್ಯ ಅರ್ಜಿಗೆ ಸಲ್ಲಿಸಿದ ತಮ್ಮ ತಕರಾರಿನಲ್ಲಿ, 1 ನೇ ಎದುರುದಾರಳು ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ಆರ್.ಎಸ್.ಎ ನಂ. 100369/22 ನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ ಎಂದು ಹೇಳಿರುತ್ತಾರೆ. ಆದರೆ, ಈ ಎಫ್.ಡಿ.ಪಿ. ನಂ. 4/2022 ರ ಪ್ರಕ್ರಿಯೇಗಳಿಗೆ ಯಾವುದೇ ಮಾನ್ಯ ಮೇಲ್ಮನವಿಯ ನ್ಯಾಯಾಲಯಗಳಿಂದ ತಡೆಯಾಜ್ಞೆಯು ಇರುತ್ತದೆಂದು ಹೇಳಿರುವುದಿಲ್ಲ. ಅಲ್ಲದೇ, ಅರ್ಜಿದಾರರು "ಬಿ ಯಿಂದ ಡಿ" ತಪಶೀಲಿನ ಆಸ್ತಿಗಳಿಗೆ ಮಾತ್ರ ಅಂತಿಮ ಡಿಕ್ರಿ ಡ್ರಾಗೊಳಿಸಲು ಮುಖ್ಯ ಅರ್ಜಿಯಲ್ಲಿ ಕೋರಿರುವುದರಿಂದ, ಹಾಗೂ ಯಾವುದೇ ಮಾನ್ಯ ಮೇಲ್ಮನವಿಯ ನ್ಯಾಯಾಲಯಗಳಿಂದ ಎಫ್.ಡಿ.ಪಿ. ನಂ. 4/2022 ರ ಪ್ರಕ್ರಿಯೇಗಳಿಗೆ ತಡೆಯಾಜ್ಞೆ ಇಲ್ಲದ ಕಾರಣ ಈ ಮಧ್ಯಂತರ ಅರ್ಜಿಗಳಲ್ಲಿ ಕೋರಿರುವಂತೆ, "ಬಿ" ಯಿಂದ ಡಿ" ತಪಶೀಲಿನ ಆಸ್ತಿಗಳನ್ನು ಆರ್. ಎ.ನಂ. 113/2018 ರ ಡಿಕ್ರಿಯಲ್ಲಿ ಹೇಳಿರುವಂತೆ, ಈ ಅರ್ಜಿದಾರರ ತಲಾ 1/7 ಹಿಸ್ಸೆ ಪ್ರತ್ಯೇಕಿಸಿ ಗಡಿ ಗುರುತಿಸಿ ನಕಾಶೆ ತಯಾರಿಸಿ ವರದಿಯನ್ನು ಸಲ್ಲಿಸಲು ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡುವುದು ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದ ಅವಶ್ಯವಾಗಿರುತ್ತದೆ. ಅಲ್ಲದೇ, ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸುವುದರಿಂದ ಎದುರುದಾರರಿಗೆ ಯಾವುದೇ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ. ಆದ್ದರಿಂದ, "ಬಿ ಮತ್ತು "ಸಿ" ತಪಶೀಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ, ಹಿರೇಕೆರೂರಿನ ತಾಲೂಕ ಸರ್ವೆಯರನ್ನು ಹಾಗೂ "ಡಿ" ತಪಶೀಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ,

ಹಿರೇಕೆರೂರಿನ ಪಿ.ಡಬ್ಲ್ಯೂ.ಡಿ ಇಲಾಖೆಯ ಎ.ಇ.ಇ. ಇವರನ್ನು ನ್ಯಾಯಾಲಯದ ಆಯುಕ್ತರನ್ನಾಗಿ ನೇಮಿಸುವುದು ಅವಶ್ಯವಾಗಿರುತ್ತದೆಂದು ತೀರ್ಮಾನಿಸಿ ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

8. **<u>ಅಂಶ-2</u>**:– ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದ:

## ಆದೇಶ

ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 13 ಹಾಗೂ ಸಹವಾಚಕ ಕಲಂ 151ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ಮತ್ತು 2 ನ್ನು 200/- ರೂ. ಗಳ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

ಹಿರೇಕೆರೂರು ತಾಲೂಕ ಸರ್ವೇಯರನ್ನು ಅರ್ಜಿಯ "ಬಿ" ಮತ್ತು "ಸಿ" ತಪಶೀಲಿನ ಆಸ್ತಿಗಳಿಗೆ ನ್ಯಾಯಾಲಯದ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಹಿರೇಕೆರೂರು ಪಿ.ಡಬ್ಲ್ಯೂ.ಡಿ. ಇಲಾಖೆಯ ಎ.ಇ.ಇ ಇವರನ್ನು ಅರ್ಜಿಯ "ಡಿ" ತಪಶೀಲಿನ ಆಸ್ತಿಗಳಿಗೆ ನ್ಯಾಯಾಲಯದ ಆಯುಕ್ತರನ್ನಾಗಿ ನೇಮಿಸಲಾಗಿದೆ.

ನ್ಯಾಯಾಲಯದ ಆಯುಕ್ತರ ಶುಲ್ಕ ತಲಾ 3,000/- ರೂ. ಗಳು ಎಂದು ನಿಗಧಿಪಡಿಸಲಾಗಿದೆ.

ಕಮೀಷನರ್ ವಾರಂಟನ್ನು ಕಳುಹಿಸಲು ಆದೇಶಿಸಿದೆ.

**(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 24 ನೇ ಮೇ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

ಸಹಿ/-
**(ವೈ. ಕೆ. ಬೇನಾಳ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಹಿರೇಕೆರೂರ.